

# ಜಾತಿಮೀರಿದ ನಡವಳಿಕೆ

■ ವನರಾಗ ಶರ್ಮಾ

ರೈಲು ಓಡುತ್ತಿತ್ತು. ಊರು ಕೇರಿಗಳನ್ನು ದಾಟಿ, ಒಂದಾದ ಮೇಲೆ ಒಂದು ಸ್ಟೇಶನ್ನುಗಳನ್ನು ದಾಟುತ್ತಿತ್ತು. ಎಲ್ಲ ನಿಲ್ದಾಣಗಳಲ್ಲೂ ಕೆಲ ಪ್ರಯಾಣಿಕರು ಇಳಿಯುತ್ತಿದ್ದರು. ಮತ್ತೆ ಕೆಲವರು ಹತ್ತಿಸಿಕೊಳ್ಳುತ್ತಿದ್ದರು. ರೈಲು ಮಾತ್ರ ತನ್ನ ಪಾಡಿಗೆ ತಾನು ಇಳಿಸುವವರನ್ನು ಇಳಿಸಿ, ಹತ್ತುವವರನ್ನು ಹತ್ತಿಸಿಕೊಂಡು ಸಾಗುತ್ತಿತ್ತು.

ರೈಲಿನ ಒಂದು ಬೋಗಿಯಲ್ಲಿ ಪ್ರಯಾಣಿಕರ ಮಾತುಕತೆ ನಡೆದಿತ್ತು. ತಮ್ಮ ಮನೆ, ವಠಾರದಿಂದ, ದೇಶ– ಜಗತ್ತಿನ ಆಗುಹೋಗುಗಳೆಲ್ಲ ಅವರು ಮಾತಿನಲ್ಲಿ ಬಂದು ಹೋಗುತ್ತಿತ್ತು. ಮಧ್ಯಾಹ್ನವಾಯಿತು, ಹಣೆಗೆ ತಿಲಕವನ್ನು ಹಚ್ಚಿಕೊಂಡಿದ್ದ ಓರ್ವ ಸೇಠಜೀ ತಾನು ತಂದಿದ್ದ ಊಟದ ಡಬ್ಬಿಯನ್ನು ತೆಗೆಯಲು ಮುಂದಾದರು. ಚಕ್ಕನೆ ಅವರಿಗೆ ತಮ್ಮ ಪಕ್ಕದಲ್ಲಿ ದಿನಪತ್ರಿಕೆ ಓದುತ್ತ ಕುಳಿತಿದ್ದ ಖಾದಿಧಾರಿಯತ್ತ ಗಮನ ಹೋಯಿತು. ಅವರ ಜಾತಿ ಯಾವುದೆಂದು ತಿಳಿದುಕೊಳ್ಳಬೇಕೆಂಬ ಇರಾದೆಯುಂಟಾಯಿತು. ಕೇಳಿದರು: ಕ್ಷಮಿಸಿ, ಸ್ವಾಮಿ ತಾವು ಯಾವ ಜಾತಿಯವರು?

ಅವರು ನಸುನಗುತ್ತ, ಸಾಧುಗಳಿಗೆ ಯಾವಜಾತಿ? ಅವರ ಜಾತಿ ಕೇಳಬಾರದೆಂದು ತಮಗೆ ಗೊತ್ತಿಲ್ಲವೆ? ಅಸಲಿಗೆ ನನ್ನ ಜಾತಿ ಯಾವುದೆಂದೇ ನನಗೆ ಗೊತ್ತಿಲ್ಲ! ಎಂದರು. ಸೇಠಜೀ ಸನ್ಯಾಸಿಗಳಿಗೆ ಜಾತಿಯಿಲ್ಲ.

ಆದರೆ ತಾವು ಕಾವಿಬಟ್ಟೆ ಧರಿಸಿಲ್ಲ. ಖಾದಿ ತೊಟ್ಟಿದ್ದೀರಿ. ಈಗ ಚಪರಾಸಿಯಿಂದ ಮಂತ್ರಿವರೆಗೂ ಖಾದಿ ಧರಿಸುತ್ತಾರೆ. ಅದೊಂದು ಫ್ಯಾಶನ್ ಆಗಿದೆ ಎಂದು ಸೇಠಜಿ ಹೇಳಿದರು.

ಜಾತಿಯನ್ನು ಹೇಳುವುದರಿಂದಾಗಲಿ ಅದನ್ನು ಮುಚ್ಚಿಡುವುದರಿಂದಾಗಲಿ ಯಾರಿಗೂ ಏನೂ ಪ್ರಯೋಜನವಾಗುವುದಿಲ್ಲ. ಆದರೂ ಇವರು ಹೇಳುತ್ತಿದ್ದಾರಲ್ಲ ಎನ್ನುವುದು ಸೇಠಜಿಯವರಿಗೆ ವಿಚಿತ್ರ ಎನಿಸಿತು. ಕುತೂಹಲ ಹೆಚ್ಚಿತು. ಕೇಳಿದರು; ತಮ್ಮದು ಹೇಳಲಾಗದ ಜಾತಿಯೋ? ಅಪ್ಪ ಬೇರೆ ಜಾತಿ, ಅಮ್ಮ ಬೇರೆ ಜಾತಿ ಅಥವಾ ಅಪ್ಪ ಅಥವಾ ಅಮ್ಮ ಗೊತ್ತಿಲ್ಲದಿದ್ದರೂ ಹೀಗಾಗುತ್ತೆ ಎಂದರು.

ಅಪ್ಪ ಅಮ್ಮನ ಕಡೆಗೇ ಸೇಠಜೀ ಬೆರಳು ತೋರಿದ್ದರು. ಆದರೂ ಅವರು ಕೋಪಗೊಳ್ಳಲಿಲ್ಲ. ಶಾಂತವಾಗಿಯೇ ಉತ್ತರಿಸಿದರು, ಸೇಠಜೀ, ನಿಮಗೆ ನನ್ನ ಜಾತಿ ಬೇಕಲ್ಲವೆ? ಮಹಾತ್ಮ ಗಾಂಧೀಜಿಯವರು ತೋರಿದ ಮಾರ್ಗದಲ್ಲಿ ನಡೆಯುವ ಜಾತಿಯವನು ನಾನು. ಮುಂಜಾನೆ ನಾನು ಶೌಚಾಲಯವನ್ನೂ, ಅಂಗಳವನ್ನೂ ಸ್ವಚ್ಛಮಾಡುತ್ತೇನೆ ಆಗ ಜಾಡಮಾಲಿ. ನಂತರ ಚಪ್ಪಲಿಗಳನ್ನು ಸ್ವಚ್ಛ ಮಾಡಿಕೊಳ್ಳುವಾಗ ಮತ್ತು ರಿಪೇರಿ ಮಾಡಿಕೊಳ್ಳುವಾಗ ಚಮ್ಮಾರ. ಬಟ್ಟೆ ಒಗೆದುಕೊಳ್ಳುವಾಗ ಅಗಸ, ಕ್ಷೌರ ಮಾಡಿಕೊಳ್ಳುವಾಗ ಕ್ಷೌರಿಕ, ಅನಂತರ ಕಾಲೇಜಿನಲ್ಲಿ ಪಾಠ ಮಾಡುವಾಗ ಬ್ರಾಹ್ಮಣ, ಸಂಜೆ ಲೆಕ್ಕ ಬರೆಯುವಾಗ ವೈಶ್ಯನಾಗುತ್ತೇನೆ. ನನ್ನ ಜಾತಿ ಯಾವುದೆಂದು ನೀವೇ ನಿರ್ಧರಿಸಿ. ನೇತಾರರ ಉತ್ತರವನ್ನು ಕೇಳಿ ಆ ಬೋಗಿಯಲ್ಲಿದ್ದವರಿಗೆಲ್ಲ ಸಂತೋಷವಾಯಿತು. ಅವರು ಆನಂದದಿಂದ ಚಪ್ಪಾಳೆ ತಟ್ಟಿನಕ್ಕರು.

ಅಷ್ಟು ಹೊತ್ತಿಗೆ ಕೊನೇ ಸ್ಟೇಶನ್ ಬಂತು. ಎಲ್ಲರೂ ಇಳಿಯ ಹತ್ತಿದರು. ಕೆಳಗೆ ನಿಂತಿದ್ದವರು ನೇತಾರರಿಗೆ ಹಾರ ಹಾಕಿ, ಹೂ ಹಣ್ಣು ನೀಡಿ, ಗೌರವಾದರಗಳಿಂದ ಸ್ವಾಗತಿಸಿದರು. ಆಗ ಸೇಠಜಿಗೆ ಅಚ್ಚರಿಯಾಯಿತು. ಅವರು ಯಾರು ಎಂದು ಅಕ್ಕಪಕ್ಕ ನಿಂತವರನ್ನು ಕೇಳಿದರು. ಯಾರೋ ಹೇಳಿದರು: ಅವರು ಆಚಾರ್ಯ ಜೆ.ಬಿ. ಕೃಪಲಾನಿ ಎಂದು.

ಸೇಠಜೀಯವರ ಮುಖ ಹುಳ್ಳಗಾಯಿತು. ಅವರು ಕೃಪಲಾನಿಯವರಿಗೆ ಕೈಮುಗಿದು, ಮಹಾನುಭಾವರೆ ತಮ್ಮ ಬಗ್ಗೆ ನನಗೆ ಗೊತ್ತಿದೆ. ಆದರೆ ಪ್ರತ್ಯಕ್ಷ ನೋಡಿರಲಿಲ್ಲ. ನಿಮ್ಮನ್ನು ಕಂಡು ನನ್ನ ಜನ್ಮ ಪಾವನವಾಯಿತು. ನನ್ನನ್ನು ಕ್ಷಮಿಸಿ ಎಂದು ಪುನಃ ಪುನಃ ಕೇಳಿಕೊಂಡರು.

ಆಗ ಕೃಪಲಾನಿ ಹೇಳಿದರು: ವ್ಯರ್ಥವಾಗಿ ಜಾತಿಯ ಹೆಗ್ಗಳಿಕೆಯನ್ನು ಸಾರುವುದನ್ನು ಬಿಟ್ಟುಬಿಡಿ. ಅದುವೇ ನಿಮಗೆ ಭೂಷಣ. ಮತ್ತು ಕ್ಷೇಮಕರ.

ಅನಂತರ ಎರಡು ಸಾಲಿನ (ದೋಹೆ) ಪದ್ಯವನ್ನು ಹೇಳಿದರು: ‘ಸೂರ್ಯನು ಚಂದ್ರನು ತಾರಾಗಣಗಳು, ಲೋಕಕೆ ಬೆಳಕನು ನೀಡಲಿಕೆ! ಜಾತಿಯ ಪಂಥವ ಕೇಳುವವೇನು?, ಏತಕೆ ಜಾತಿಯ ಹೆಗ್ಗಳಿಕೆ?!’ ಎಂದು. ಸೇಠಜಿ ವಿನಯದಿಂದ ಒಪ್ಪಿ ತಲೆಯಾಡಿಸಿದರು.

(ಸಂಗ್ರಹ)